**OS No. 144/2024**
**ಪಿ.ಡಬ್ಲ್ಯೂ: 1**

**ದಿನಾಂಕ: 24-11-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ನಂಬರ 2 ರಿಂದ 4 ರವರ ಪರ: ಶ್ರೀ ಎಮ್.ಎಸ್. ಕೆ ವಕೀಲರಿಂದಃ**

1. ನಾನು ಒಕ್ಕಲುತನ ಕೆಲಸ ಮಾಡುತ್ತೇನೆ. ವಾದಿಯ ಪರಿಚಯವಿದೆ. ಅಂಗಡಿಯ ಚಕಬಂದಿ ಹೇಳಲು ಬರುವುದಿಲ್ಲ. ಅಂಗಡಿಯು ವಾದಿಯ ಮನೆಯ ಮುಂದೆ ಇರುತ್ತದೆ. ಸದರಿ ಅಂಗಡಿಯು ಸಾರ್ವಜನಿಕ ಖುಲ್ಲಾ ಜಾಗದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಾದಿಯ ಮನೆಯ ಜಾಗ ಗೊತ್ತಿರುವುದಿಲ್ಲ. ವಾದಿಯ ಮನೆಯ ಮುಂದೆ ಇರುವ ಜಾಗ ಸರಕಾರಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಧಿಕಾರಿಗಳು ದಿನಾಂಕಃ 02-11-2023 ರಂದು ಬಂದಿರುತ್ತಾರೆ. ಪಿ.ಡಿ.ಓ ಮತ್ತು ಪೊಲಿಸರು ಬಂದಿದ್ದರು ಮತ್ತು ಅಂಗಡಿಗಳನ್ನು ತೆರವು ಮಾಡುತ್ತಿದ್ದರು. ತೆರವು ಮಾಡುವಾಗ ನಾನು ಇದ್ದೆ ಬೇರೆಯವರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಅಂಗಡಿಯ ವಿಸ್ತೀರ್ಣ ಹೇಳಲು ಬರುವುದಿಲ್ಲ. ಸದರಿ ವಾದಿಯ ಅಂಗಡಿಯಲ್ಲಿ ಕಿರಾಣಿ ವಸ್ತುಗಳು ನಷ್ಟ ಆಗಿರುತ್ತವೆ. ನನಗೆ ವಸ್ತುಗಳ ಹೆಸರು ಹೇಳಲು ಬರುವುದಿಲ್ಲ. 3 ರಿಂದ 4 ಲಕ್ಷ ರೂ. ನಷ್ಟ ಆಗಿರುತ್ತದೆ. ಅಂದಾಜು ಆಧಾರದ ಮೇಲೆ ಹೇಳಿರುತ್ತೇನೆ. ಅಂಗಡಿ ಇತ್ತಾ ಅಥವಾ ಡಬ್ಬಿ ಇತ್ತಾ? ಎಂದರೆ ಸಾಕ್ಷಿಯು ಅಂಗಡಿ ಇತ್ತು ಎಂದು ನುಡಿಯುತ್ತಾರೆ. ಮೈಲಾಪೂರದಲ್ಲಿ ಬೇರೆಯವರ ಅಂಗಡಿಗಳು ಇವೆ ಎಂದರೆ ಸರಿ. ಎಲ್ಲಾ ಅಂಗಡಿ ಮಾಲೀಕರಿಗೆ ನೋಟಿಸು ನೀಡಿರುತ್ತಾರೆ ಎಂದರೆ ಸರಿ. ನೋಟಿಸು ನೀಡಿದ ನಂತರ ಎಲ್ಲರೂ ತೆರವು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಾದಿಯ ಅಂಗಡಿ ಈಗ ಅಸ್ತಿತ್ವದಲ್ಲಿ ಇದೆಯಾ? ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಕೂಡ ಅಂಗಡಿಯನ್ನು ತೆರವು ಮಾಡಿಕೊಂಡಿರುತ್ತಾಳೆ ಯಾವುದೇ ನಷ್ಟ ಪ್ರತಿವಾದಿಯರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾದಿಯು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾಳೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆಯಾಗದೆ ಇದ್ದರೂ ಕೂಡ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂಬರ 1 ರವರ ಪರ ವಕೀಲರು ಪ್ರತಿವಾದಿ ನಂಬರ 2 ರಿಂದ 4 ರವರ ಪಾಟಿ ಸವಾಲನ್ನು ಅಳವಡಿಸಲು ಕೋರಿರುತ್ತಾರೆ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**